ಕರ್ನಾಟಕ ಸರಕಾರ

# ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ ವಿಜಯಪುರ

ದೂರವಾಣಿ ಸಂಖ್ಯೆ :- 08352-250107 ಫ್ಯಾಕ್ಸ್ :- 08352-258038 ಇ-ಮೇಲ್:-dhobijapur@gmail.com

ಸಂಖ್ಯೆ/ಜಿಆಕುಕಅ/ಹೆಚ್.ಎಸ್/41/2017-18 ದಿನಾಂಕ: 30-08-2017

ಗೆ,

ಪ್ರಾಂಶುಪಾಲರು,
ಆದರ್ಶ ಪ್ಯಾರಾ ಮೇಡಿಕಲ್ ಇನ್ಸಟ್ಯೂಟ್(ರಿ),
ಜತ್ತ ರೋಡ, ತಿಕೋಟಾ ತಾ:ಜಿ:ವಿಜಯಪುರ

ಮಾನ್ಯರೆ,

ವಿಷಯ: ಆದರ್ಶ ಪ್ಯಾರಾ ಮೇಡಿಕಲ್ ಇನ್ಸಟ್ಯೂಟ್ ಡಿಪ್ಲೋಮಾ ಹೆಲ್ತ ಇನ್ಸಪೇಕ್ಟರ್(ಡಿ.ಹೆಚ್.ಐ.ಸಿ) ವಿದ್ಯಾರ್ಥಿಗಳಿಗೆ ಕ್ಷೇತ್ರ ಆರೋಗ್ಯ ಕಾರ್ಯಕ್ರಮದ ಕಾರ್ಯಚಟುವಟಿಕೆ(ಪ್ರಾಯೋಗಿಕ) ಮತ್ತು ಕ್ಲಿನಿಕಲ್ ಅಭ್ಯಾಸ ಮಾಡಲು ಅನುಮತಿ ನೀಡುವ ಕುರಿತು.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ 245/ಎ.ಪಿ.ಎಮ್.ಐ.ಟಿ/2017 ದಿ: 10-08-2017

*****

ಮೇಲಿನ ವಿಷಯ ಹಾಗೂ ಉಲ್ಲೇಖದವರನ್ವಯ ಆದರ್ಶ ಪ್ಯಾರಾ ಮೇಡಿಕಲ್ ಇನ್ಸಟ್ಯೂಟ್ ಡಿಪ್ಲೋಮಾ ಹೆಲ್ತ ಇನ್ಸಪೇಕ್ಟರ್(ಡಿ.ಹೆಚ್.ಐ.ಸಿ) ವಿದ್ಯಾರ್ಥಿಗಳಿಗೆ ಪ್ರಾ.ಆ.ಕೇಂದ್ರ ತಿಕೋಟಾದಲ್ಲಿ ಗ್ರಾಮೀಣ ಆರೋಗ್ಯ ಕಾರ್ಯಕ್ರಮದ ಕಾರ್ಯಚಟುವಟಿಕೆ ಅಭ್ಯಾಸ ಮಾಡಲು ಮತ್ತು ಕ್ಲಿನಿಕಲ್ ಅಭ್ಯಾಸಕ್ಕಾಗಿ ಅನುಮತಿಗಾಗಿ ವಿನಂತಿಸಿರುವುದು.

ಸದರಿ ವಿದ್ಯಾರ್ಥಿಗಳಿಗೆ ಗ್ರಾಮೀಣ ಕ್ಷೇತ್ರ ಆರೋಗ್ಯ ಕಾರ್ಯಕ್ರಮದ ಕಾರ್ಯಚಟುವಟಿಕೆ(ಪ್ರಾಯೋಗಿಕ) ಮತ್ತು ಕ್ಲಿನಿಕಲ್ ಅಭ್ಯಾಸ ಮಾಡಲು ಪ್ರಾ.ಆ.ಕೇಂದ್ರ ತಿಕೋಟಾದಲ್ಲಿ ಈ ಕೆಳಗಿನ ಷರತ್ತುಗಳೊಂದಿಗೆ ಅನುಮತಿ ನೀಡಲಾಗಿದೆ.

ಪ್ರತಿ ವಿದ್ಯಾರ್ಥಿಗೆ ರೂ.250=00ರಂತೆ ಒಟ್ಟು ವಿದ್ಯಾರ್ಥಿಗಳ ಅನುಗುಣವಾಗಿ ಮೊತ್ತದ ಡಿ.ಡಿ.ಯನ್ನು ಆರೋಗ್ಯ ರಕ್ಷಾ ಸಮಿತಿ ತಾಲೂಕಾ ಆರೋಗ್ಯಾಧಿಕಾರಿಗಳು ವಿಜಯಪುರ ಅವರ ಹೆಸರಿನಿಂದ ಪಡೆದು ಅವರಿಗೆ ಸಂದಾಯ ಮಾಡಿ ಸದರಿ ಡಿ.ಡಿ. ಝುರಾಕ್ಸ್ ಪ್ರತಿಯನ್ನು ತಾಲೂಕಾ ಆರೋಗ್ಯಾಧಿಕಾರಿಗಳ ರುಜುವಿನೊಂದಿಗೆ ಮತ್ತು ಸಂಸ್ಥೆಯಲ್ಲಿ ಕ್ಷೇತ್ರ ಅಭ್ಯಾಸ ಮಾಡುವ ಪಟ್ಟಿಯನ್ನು ಹಾಗೂ ಆರೋಗ್ಯ ಕೇಂದ್ರದಲ್ಲಿ ಅಭ್ಯಾಸಿಸುವ ಅವಧಿಯನ್ನು ಸಲ್ಲಿಸಲು ಸೂಚಿಸಿದೆ. ಅದರಂತೆ ಸರಕಾರದ ಆದೇಶದ ಮಂಜೂರಾತಿಯಲ್ಲಿರುವ ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು. ಯಾವುದೇ ಆಕ್ಷೇಪಣೆ ಬಂದಲ್ಲಿ ತಮ್ಮನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು.

ನಿಮ್ಮ ವಿದ್ಯಾರ್ಥಿಗಳಿಂದ ಆರೋಗ್ಯ ಕಾರ್ಯಕ್ರಮಕ್ಕೆ ಮತ್ತು ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಲು ಸೂಚಿಸಲು ತಿಳಿಸಲಾಗಿದೆ. ಸದರಿ ಅನುಮತಿಯು 2017-18ನೇ ಸಾಲಿಗಾಗಿ ಮಾತ್ರ ಅನ್ವಯಿಸುವುದು.

ತಮ್ಮ ವಿಶ್ವಾಸಿ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ವಿಜಯಪುರ

ಪ್ರತಿಯನ್ನು: ವೈದ್ಯಾಧಿಕಾರಿಗಳು ಪ್ರಾ.ಆ.ಕೇಂದ್ರ ತಿಕೋಟಾ ಅವರಿಗೆ ಮಾಹಿತಿಗಾಗಿ ಹಾಗೂ ಕ್ರಮಕ್ಕಾಗಿ
ಪ್ರತಿಯನ್ನು: ತಾಲೂಕಾ ಆರೋಗ್ಯಾಧಿಕಾರಿಗಳು ವಿಜಯಪುರ ಅವರ ಮಾಹಿತಿಗಾಗಿ ಕಳುಹಿಸಿದೆ.

Scanned by CamScanner